# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 135 | Pages. 2 | Date: 01-05-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 135 - ಪುಟಗಳು : 2 | 01-05-2026 | ಶುಕ್ರವಾರ | Ph: 8762954248 | ದರ : ₹1


# ಅತ್ಯಾಚಾರ-ಕೊಲೆ ಅಪರಾಧಿಗೆ ಜೀವಾವಧಿ

## 2018ರ ಪ್ರಕರಣ : ಮತ್ತೊಬ್ಬನಿಗೆ 2 ವರ್ಷ ಕಠಿಣ ಸಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2018ರಲ್ಲಿ ನಡೆದಿದ್ದ ಯುವತಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಪ್ರಮುಖ ಅಪರಾಧಿಗೆ ಹಾಸನದ ಮೂರನೇ ಹೆಚ್ಚುವರಿ ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದ್ದು, ಮತ್ತೊಬ್ಬ ಅಪರಾಧಿಗೆ 2 ವರ್ಷಗಳ ಕಠಿಣ ಸಜೆ ವಿಧಿಸಿ, ಏ. 27ರಂದು ತೀರ್ಪು ನೀಡಿದೆ.

ತಾಲೂಕಿನ ಹಾಡ್ಲಗೆರೆಪುರದ ನಿವಾಸಿಗಳಾದ ಪ್ರವೀಣ್(29) ಮತ್ತು ತಮ್ಮಣ್ಣಿ(62) ಶಿಕ್ಷೆಗೆ ಗುರಿಯಾದ ಅಪರಾಧಿಗಳಾಗಿದ್ದಾರೆ.

2018ರಲ್ಲಿ ನಡೆದಿದ್ದ ಯುವತಿಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಗ್ರಾಮಾಂತರ ಠಾಣೆ ಸಿ.ಪಿ.ಐ. ಪಿ.ಕೆ ರಾಜು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಇದರ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ, ಪ್ರವೀಣ್ ಮೇಲಿನ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302ರ (ಕೊಲೆ), 376 (ಅತ್ಯಾಚಾರ) ಮತ್ತು 201 (ಸಾಕ್ಷ್ಯನಾಶ) ಜೊತೆಗೆ ಸೆಕ್ಷನ್ 34ರ ಅಡಿಯಲ್ಲಿ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಜೀವಾಧಿ ಶಿಕ್ಷೆ ವಿಧಿಸಿದರು.

ತಮ್ಮಣ್ಣಿ ಮೇಲಿನ ಭಾರತೀಯ ದಂಡ ಸಂಹಿತೆ



ಸೆಕ್ಷನ್ 201 (ಸಾಕ್ಷ್ಯ ನಾಶ) ಹಾಗೂ ಸೆಕ್ಷನ್ 34ರ ಅಡಿಯಲ್ಲಿನ ಸಾಕ್ಷ್ಯ ನಾಶ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 2 ವರ್ಷ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

**ಶಿಕ್ಷೆಯ ಪ್ರಮಾಣ ಏನು:** ಅಪರಾಧಿ ಪ್ರವೀಣ್‌ಗೆ ಕೊಲೆ ಕೇಸಿನಲ್ಲಿ ಜೀವಾವಧಿ ಸೆರೆವಾಸ ಮತ್ತು 20 ಸಾವಿರ ರೂ. ದಂಡ ವಿಧಿಸಿದ್ದು, ದಂಡ ಪಾವತಿಸಲು ವಿಫಲವಾದರೆ 1 ವರ್ಷ ಸಾದಾ ಸೆರೆವಾಸ ಅನುಭವಿಸಬೇಕು.

ಅತ್ಯಾಚಾರ ಪ್ರಕರಣದಲ್ಲಿ 10 ವರ್ಷಗಳ ಕಠಿಣ ಸೆರೆವಾಸ ಮತ್ತು 10 ಸಾವಿರ ರೂ. ದಂಡ ವಿಧಿಸಿದ್ದು,



ಅದನ್ನು ಪಾವತಿಸಲು ವಿಫಲವಾದರೆ 6 ತಿಂಗಳು ಸಾದಾ ಶಿಕ್ಷೆ ಮತ್ತು ಸಾಕ್ಷ್ಯನಾಶ ಅಪರಾಧಕ್ಕೆ, 3 ವರ್ಷಗಳ ಕಠಿಣ ಸೆರೆವಾಸ ಮತ್ತು 5,000 ರೂ. ದಂಡ. ಅದನ್ನು ಪಾವತಿಸದಿದ್ದರೆ 3 ತಿಂಗಳು ಸಾದಾ ಸೆರೆವಾಸ ಅನುಭವಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತಮ್ಮಣ್ಣಿಗೆ ಸಾಕ್ಷ್ಯನಾಶ ಅಪರಾಧಕ್ಕೆ 2 ವರ್ಷಗಳ ಕಠಿಣ ಸೆರೆವಾಸ ಮತ್ತು 5,000 ರೂ. ದಂಡ. ಅದನ್ನು ಪಾವತಿಸಲು ವಿಫಲವಾದರೆ 3 ತಿಂಗಳು ಸಾದಾ ಸೆರೆವಾಸ ಅನುಭವಿಸಬೇಕು. ಎಲ್ಲಾ ಶಿಕ್ಷೆಗಳನ್ನು ಏಕ ಕಾಲಕ್ಕೆ ಅನುಭವಿಸಬೇಕು ಎಂದು ನ್ಯಾಯಾಲಯ ತೀರ್ಪಿನಲ್ಲಿ ಹೇಳಿದೆ.

ಪ್ರವೀಣ್ ವಿಚಾರಣಾಧೀನ ಕೈದಿಯಾಗಿ 1 ವರ್ಷ 20 ದಿನ ಹಾಗೂ ತಮ್ಮಣ್ಣಿ 3 ತಿಂಗಳು 22 ದಿನ ವಿಚಾರಣಾಧೀನ ಕೈದಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದರು.


### 30 ದಿನಗಳ ಕಾಲ ತಡೆ

**ಇಬ್ಬರು ಅಪರಾಧಿಗಳ ಪೈಕಿ ತಮ್ಮಣ್ಣಿಗೆ ವಿಧಿಸಿರುವ ಶಿಕ್ಷೆಗೆ 30 ದಿನಗಳ ತಡೆ ನೀಡಲಾಗಿದೆ . ಈ ಮೂಲಕ ಆತನಿಗೆ ಮೇಲ್ಮನವಿಗೆ ಅವಕಾಶ ಒದಗಿಸಿದೆ. ಈ ಮೂಲಕ ನ್ಯಾಯಾಲಯ ತಾತ್ಕಾಲಿಕ ವಿನಾಯಿತಿ ನೀಡಿದೆ. ಸಿ.ಆರ್.ಪಿ.ಸಿ. ಸೆಕ್ಷನ್ 389(3)ರ ಅಡಿಯಲ್ಲಿ ಪ್ರತ್ಯೇಕ ಆದೇಶ ಹೊರಡಿಸಿ, ತಮ್ಮಣ್ಣಿಗೆ ವಿಧಿಸಲಾದ ಶಿಕ್ಷೆಯನ್ನು 30 ದಿನಗಳ ಕಾಲ ತಡೆ ಹಿಡಿದಿದೆ. ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ಆದೇಶದವರೆಗೆ ಅವರನ್ನು ಬಂಧಿಸಬಾರದು ಎಂದು ವಾರಂಟ್‌ನಲ್ಲಿ ಸ್ಪಷ್ಟಪಡಿಸಲಾಗಿದೆ.**

**ಸದ್ಯ ಪ್ರವೀಣ್ ಮಾತ್ರ ಜೈಲಿಗೆ: ಈ ವಾರಂಟ್ ಅಡಿ ಸದ್ಯಕ್ಕೆ ಅಪರಾಧಿ 1 ಪ್ರವೀಣ್‌ನನ್ನು ಮಾತ್ರ ಜಿಲ್ಲಾ ಉಪ ಕಾರಾಗೃಹಕ್ಕೆ ಒಪ್ಪಿಸಿ, ಕಾನೂನು ರೀತಿ ಶಿಕ್ಷೆ ಜಾರಿಗೊಳಿಸಬೇಕು ಎಂದು ನ್ಯಾಯಾಲಯ ಕಾರಾಗೃಹ ಅಧೀಕ್ಷಕರಿಗೆ ಆದೇಶಿಸಿದೆ.**

# ಹೆತ್ತೂರು ಬಳಿ ಹೊಸ ಸಲಗ ಪ್ರತ್ಯಕ್ಷ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ : ಈಗಾಗಲೇ ಜಿಲ್ಲೆಯ ಮಲೆನಾಡು ಭಾಗ ಸೇರಿದಂತೆ ಹಲವು ಕಡೆಗಳಲ್ಲಿ ಕಾಡಾನೆ ಕಾಟ ಮಿತಿ ಮೀರಿರುವಾಗಲೇ ಇದೀಗ ಹೊಸ ಸಲಗವೊಂದು ಎಂಟ್ರಿಕೊಟ್ಟಿದೆ.


ಹೌದು; ತಾಲ್ಲೂಕಿನ, ಹೆತ್ತೂರು ಹೋಬಳಿ, ಹಳ್ಳಿ ಬೈಲು ಗ್ರಾಮದ ಅಡಕೆ ತೋಟದಲ್ಲಿ ಉದ್ದನೆಯ ದಂತಗಳುಳ್ಳ ದೈತ್ಯಾಕಾರದ ಕಾಡಾನೆ ಕಾಣಿಸಿಕೊಂಡಿದೆ. ಬಹುಶಃ ಈ ಸಲಗ ಹೊರ ರಾಜ್ಯ ಅಥವಾ ಹೊರ ಜಿಲ್ಲೆಯಿಂದ ಮಲೆನಾಡು ಭಾಗಕ್ಕೆ ಎಂಟ್ರಿಕೊಟ್ಟಿರಬಹುದು ಎಂದು ಶಂಕಿಸಲಾಗಿದೆ.

ಜಿಲ್ಲೆಯಲ್ಲಿ ಹಿಂದೆಂದೂ ಕಾಣದಂತಹ ಉದ್ದನೆಯ ದಂತಗಳುಳ್ಳ ದೊಡ್ಡ ಗಾತ್ರದ ಕಾಡಾನೆ ಇದಾಗಿದ್ದು, ದೈತ್ಯಾಕಾರದ ಕಾಡಾನೆ ಕಂಡು ನೋಡಿದವರು ಅಕ್ಷರಶಃ ಭಯಭೀತರಾಗಿದ್ದಾರೆ.

ವಾಸದ ಮನೆಯ ಹಿಂಭಾಗವಿರುವ ತೋಟದ ಮಧ್ಯೆ ಕೆಲಕಾಲ ನಿಂತಿದ್ದ ಒಂಟಿಸಲಗ, ನಂತರ ಕಾಡಿನೊಳಗೆ ಸೇರಿಕೊಂಡಿತು. ಹೊಸ ಸಲಗ ಯಾವಾಗ ಏನು ಮಾಡುವುದೋ ಎಂಬ ಆತಂಕ ಕೂಲಿ ಕಾರ್ಮಿಕರು ಹಾಗೂ ಸ್ಥಳೀಯರಲ್ಲಿ ಮನೆ ಮಾಡಿದೆ.

ಮತ್ತೊಂದೆಡೆ ಬೇರೆಡೆಗಳಿಂದ ಕಾಡಾನೆಗಳನ್ನು ಜಿಲ್ಲೆಗೆ ಸ್ಥಳಾಂತರ ಮಾಡಲಾಗುತ್ತಿದೆಯೇ ಎಂಬ ಅನುಮಾನ ಕಾಡತೊಡಗಿದೆ. ಏಕೆಂದರೆ ಮೊನ್ನೆ ಕಾಡಾನೆ ಸಮಸ್ಯೆ ಪರಿಹಾರ ಸಂಬಂಧ ಸಭೆ ನಡೆಸಿ ಮತ್ತು ಬೇಲೂರು ಮೊದಲಾದ ಕಡೆಗಳಿಗೆ ಭೇಟಿ ನೀಡಿದ್ದ ವೇಳೆ ಮಾತನಾಡಿದ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ನಾವು ಬಯಲು ಸೀಮೆಯವರು, ನಮ್ಮ ಭಾಗದಲ್ಲಿ ಕೋತಿಗಳನ್ನು ಕಾಡಿಗೆ ಬಿಟ್ಟರೂ ಜನರು ವಿರೋಧಿಸುತ್ತಾರೆ. ಆದರೆ ಕಳೆದ ಮೂರು ವರ್ಷಗಳಿಂದ ಬೇಲೂರು ಭಾಗಕ್ಕೆ ಉದ್ದೇಶ ಪೂರ್ವಕವಾಗಿ ಕಾಡಾನೆಗಳನ್ನು ಸ್ಥಳಾಂತರಿಸುತ್ತಿರುವ ಅನುಮಾನ ವ್ಯಕ್ತಪಡಿಸಿದ್ದರು.

ತಕ್ಷಣವೇ ಮೂಡಿಗೆರೆ, ಚಿಕ್ಕಮಗಳೂರು ಮತ್ತು ಬೇಲೂರು ವಲಯ ಅಧಿಕಾರಿಗಳ ಸಭೆ ನಡೆಸುವ ಮಾತುಗಳನ್ನಾಡಿದ್ದರು. ಆದರೀಗ ಸಕಲೇಶಪುರ ಭಾಗದಲ್ಲಿ ಹೊಸ ಸಲಗ ಕಾಣಿಸಿಕೊಂಡಿರುವುದು ಚರ್ಚೆ ಹುಟ್ಟುಹಾಕಿರುವುದಂತೂ ಸತ್ಯ.



# ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಗೆ ಭರ್ಜರಿ ಫಲಿತಾಂಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನಗರದ ಪ್ರತಿಷ್ಠಿತ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯು 2026ನೇ ಸಾಲಿನ CISCE ಪರೀಕ್ಷೆಯಲ್ಲಿ ಅಪ್ರತಿಮ ಸಾಧನೆ ಮಾಡಿದೆ. ಶಾಲೆಗೆ ಶೇಕಡಾ 100ರಷ್ಟು ಫಲಿತಾಂಶ ಬಂದಿರುವುದು ಮಾತ್ರವಲ್ಲದೆ, ಪರೀಕ್ಷೆಗೆ ಹಾಜರಾದ ಎಲ್ಲಾ 31 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಹೊಸ ದಾಖಲೆ ನಿರ್ಮಿಸಿದ್ದಾರೆ.

### ಸಾಧಕ ವಿದ್ಯಾರ್ಥಿಗಳ ಸಂಭ್ರಮ

ಶಾಲೆಯ ವಿದ್ಯಾರ್ಥಿನಿ ಜನ್ಯಾ ವೈ.ಬಿ ಶೇ. 97ರಷ್ಟು ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದರೆ, ದಿವಿಟಾ ಡೇವಿಡ್, ಸುಹಾನಿ ಮತ್ತು ತನ್ವಿಕಾ ವಿ ತಲಾ ಶೇ. 96ರಷ್ಟು ಅಂಕಗಳಿಸಿ ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಇನ್ನುಳಿದಂತೆ ವನಿಹಾ ಸಿ, ಸುಜನ್ ಎಸ್ ಕಶ್ಯಪ್ ಮತ್ತು ಪುರುಷೋತ್ತಮ್ ಎನ್.ಜೆ ಶೇ. 95ರಷ್ಟು ಅಂಕಗಳೊಂದಿಗೆ ಗಮನಾರ್ಹ ಸಾಧನೆ ಮಾಡಿದ್ದಾರೆ.

### ಎಲ್ಲರೂ ಡಿಸ್ಟಿಂಕ್ಷನ್ ಸಾಧಕರು

ವಿಶೇಷವೆಂದರೆ, ಈ ಬಾರಿ ಪರೀಕ್ಷೆ ಬರೆದ 31 ವಿದ್ಯಾರ್ಥಿಗಳೂ ಸಹ ಶೇಕಡಾ 70ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಟಿಡಿಸ್ಟಿಂಕ್ಷನ್‌ಟಿ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯ ಗುಣಮಟ್ಟದ ಶಿಕ್ಷಣ ಮತ್ತು ಶಿಕ್ಷಕರ ನಿರಂತರ ಪರಿಶ್ರಮಕ್ಕೆ ಈ ಫಲಿತಾಂಶ ಸಾಕ್ಷಿಯಾಗಿದೆ. ಪುಣ್ಯ ಎಸ್ ಗೌಡ (94%), ದರ್ಶಿನಿ ಎಂ (93%), ದೀಕ್ಷಾ ಹೆಚ್.ವಿ (93%), ಧೀಮಂತ್ ಟಿ ಜನಿವಾರ (92%), ಸ್ಕಂದ ಎಂ ಶೆಟ್ಟಿ (90%) ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಶಾಲೆಯ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ವಿದ್ಯಾರ್ಥಿಗಳ ಈ ಅದ್ಭುತ ಮೈಲಿಗಲ್ಲಿಗೆ ಶಾಲೆಯ ಆಡಳಿತಾಧಿಕಾರಿ ಡಾ.ಎಚ್.ಎನ್.ಚಂದ್ರಶೇಖರ್, ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗೂ ಶಿಕ್ಷಕ ವೃಂದ ಹರ್ಷ ವ್ಯಕ್ತಪಡಿಸಿ, ಸಾಧಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಮಳೆ ನೀರಿನಲ್ಲಿ ಕೊಚ್ಚಿ ಹೋದ ರೈತ!



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು ತಾಲೂಕಿನಲ್ಲಿ ಭಾರೀ ಮಳೆಯ ಅಬ್ಬರಕ್ಕೆ ರೈತನೊಬ್ಬರು ನೀರಿನಲ್ಲಿ ಕೊಚ್ಚಿ ಹೋಗಿ ಸಾವನ್ನಪ್ಪಿದ ದಾರುಣ ಘಟನೆ ನಡೆದಿದೆ.

ತಾಲೂಕಿನ ಚೀಲನಾಯಕನಹಳ್ಳಿಯಲ್ಲಿ ಸುರಿದ ಭಾರೀ ಮಳೆಯಿಂದಾಗಿ ರಸ್ತೆಯ ಮೇಲೆ ವೇಗವಾಗಿ ಹರಿದ ನೀರು ಅಪಾಯಕ್ಕೆ ಕಾರಣವಾಯಿತು. ರೈತ ಬಸವರಾಜು (62) ಎಂದಿನಂತೆ ಸಂಜೆ ವೇಳೆ ಊರಿಗೆ ತೆರಳುತ್ತಿದ್ದಾಗ ಮಳೆಯ ತೀವ್ರತೆ ಹೆಚ್ಚಾದ ಹಿನ್ನೆಲೆಯಲ್ಲಿ ಚೀಲನಾಯಕನಹಳ್ಳಿ ಗೇಟ್ ಬಳಿ ಕೂತಿದ್ದರು. ಈ ವೇಳೆ ಆಕಸ್ಮಿಕವಾಗಿ ಹರಿದು ಬಂದ ನೀರಿನ ಪ್ರವಾಹಕ್ಕೆ ಸಿಲುಕಿ ಹೆಚ್ಚು ದೂರ ತೇಲಿ ಹೋಗಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ಘಟನೆ ಕಂಡ ಸ್ಥಳೀಯರು ತಕ್ಷಣ ರಕ್ಷಣಾ ಕಾರ್ಯಕ್ಕೆ ಮುಂದಾದರೂ, ನೀರಿನ ಹರಿವು ಜಾಸ್ತಿಯಾಗಿದ್ದರಿಂದ ಅವರನ್ನು ಉಳಿಸಲು ಸಾಧ್ಯವಾಗಲಿಲ್ಲ ಎನ್ನಲಾಗಿದೆ. ಬಳಿಕ ಮೃತದೇಹವನ್ನು ಹೊರತೆಗೆದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಈ ಘಟನೆ ಗ್ರಾಮದಲ್ಲಿ ಶೋಕ ವಾತಾವರಣ ನಿರ್ಮಾಣವಾಗಿದೆ.

ಭಾರೀ ಮಳೆಯ ಸಮಯದಲ್ಲಿ ಜನರು ಎಚ್ಚರಿಕೆಯಿಂದ ಇರಬೇಕು, ನೀರಿನ ಹರಿವು ಇರುವ ಪ್ರದೇಶಗಳ ಬಳಿ ಹೋಗುವುದನ್ನು



ತಪ್ಪಿಸಬೇಕು ಎಂದು ಅಧಿಕಾರಿಗಳು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಮತಿಘಟ್ಟ ಭಾಗದಲ್ಲಿ ಮಳೆಗೆ 100 ತೆಂಗು, 300 ಅಡಿಕೆ, ಮರಗಳು ಗಾಳಿ ಮಳೆಗೆ ಬಿದ್ದು ಹೋಗಿವೆ. ವಿದ್ಯುತ್ ಕಂಬಗಳು ಮುರಿದು ಬಿದ್ದಿರುವುದರಿಂದ ಗ್ರಾಮಗಳಲ್ಲಿ ರಾತ್ರಿ ಕತ್ತಲೆ ಆವರಿಸಿತ್ತು.

# ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

ಹಾಸನ : ಮೊಸಳೆಹೊಸಹಳ್ಳಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27 ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಮೂರು ವರ್ಷದ ಸಿವಿಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್, ಎಲೆಕ್ಟ್ರಿಕಲ್ ಎಲೆಕ್ಟ್ರಾನಿಕ್ಸ್ ವಿಭಾಗಗಳಲ್ಲಿ ಪ್ರವೇಶಾತಿ ಪ್ರಾರಂಭವಾಗಿದ್ದು, ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮೊದಲನೇ ವರ್ಷಕ್ಕೆ ಆಫ್ ಲೈನ್ ಮೂಲಕ ಕಾಲೇಜಿನಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಕಾಲೇಜಿನಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರವೇಶ ಪಡೆಯಬಹುದಾಗಿದೆ, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9019748969, 7259787711, 9738281913ರಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಾಂಶುಪಾಲರಾದ ಉಷಾರಾಣಿ ಎಸ್. ಬಿ ತಿಳಿಸಿರುತ್ತಾರೆ.

# ಹಸೆಮಣೆ ಏರಬೇಕಿದ್ದ ಯುವಕ ಮಸಣಕ್ಕೆ


## ಫೋಟೋ ಶೂಟಿಂಗ್-ಮದುವೆ ಆಸೆ ಮಣ್ಣುಪಾಲು: ಮನೆಯಲ್ಲಿ ಕಣ್ಣೀರ ಗೋಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಧಿ ಬರಹ ಎಂಥ ಘೋರ, ಎಷ್ಟೊಂದು ಕ್ರೂರ ಎಂಬುದಕ್ಕೆ ಹಸಮಣೆ ಏರಬೇಕಿದ್ದ ಯುವಕ, ಅಪಘಾತಕ್ಕೆ ಬಲಿಯಾಗಿರುವ ದುರ್ಘಟನೆ ಕಣ್ಣಮುಂದಿನ ಉದಾಹರಣೆ.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಬೇಲೂರು ತಾಲೂಕು ಲಕ್ಕುಂದ ಗ್ರಾಮದ ದರ್ಬಾರ್ ಪೇಟೆಯ ಯಶೋಧಮ್ಮ-ರಾಜೇಗೌಡ ಎಂಬುವರ ಪುತ್ರ ಮನು ಅಲಿಯಾಸ್ ಗಿರೀಶ್ ಮೇ 10 ರಂದು ಹಸಮಣೆ ಏರಿ ವೈವಾಹಿಕ ಜೀವನಕ್ಕೆ ಕಾಲಿಡಬೇಕಿತ್ತು.

ಆದರೆ ಪ್ರೀ ವೆಡ್ಡಿಂಗ್ ಶೂಟ್‌ಗೆ ಹೋಗುವಾಗ ಸಕಲೇಶಪುರ ತಾಲ್ಲೂಕಿನ ಮೂಗಲಿ ಎಂಬಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮನು ಮೃತಪಟ್ಟಿದ್ದಾನೆ. ಇದರಿಂದ ಸಂಭ್ರಮ ಕಳೆ ಕಟ್ಟುತ್ತಿದ್ದ ಮದುವೆ ಮನೆಯಲ್ಲಿ ಇದೀಗ ದಿಡೀರ್ ದುಃಖದ ಕಾರ್ಮೋಡ ಕವಿದಿದೆ. ಸಂತಸ ಕಣ್ಣೀರಾಗಿ ಪರಿವರ್ತನೆಯಾಗಿದೆ.






ಭಾನುವಾರವೇ ಮದುವೆ ಇದ್ದುದರಿಂದ ಇದಕ್ಕಾಗಿ ಎಲ್ಲಾ ಸಿದ್ಧತೆಗಳು ಭರದಿಂದ ಸಾಗಿದ್ದವು. ಮನೆಯಲ್ಲಿ ಸಂಭ್ರಮದ ವಾತಾವರಣವಿತ್ತು. ನೆಂಟರಿಷ್ಟರು ಮದುವೆ ಸಂಭ್ರಮ ಕಣ್ತುಂಬಿಕೊಳ್ಳಲು ಹಂತ ಹಂತವಾಗಿ ವರನ ಮನೆಗೆ ಆಗಮಿಸುತ್ತಿದ್ದರು.

ಆದರೀಗ ಅದಕ್ಕೂ ಮುನ್ನ ಹಸಮಣೆ ಏರಬೇಕಿದ್ದ ಮನು, ಮಸಣ ಸೇರಿರುವುದು ಪ್ರತಿಯೊಬ್ಬರನ್ನು ದುಃಖದ ಕಡಲಿನಲ್ಲಿ ಮುಳುಗಿಸಿದೆ.

ನಡೆದಿದ್ದೇನು: ಆಲೂರು ತಾಲೂಕು ತೊಗರನಹಳ್ಳಿಯ ಲಕ್ಷ್ಮಿ-ವೆಂಕಟೇಶ್ ದಂಪತಿ ಪುತ್ರಿ ಕಾಂಚನಾ ಅವರೊಂದಿಗೆ ಮನು ಮದುವೆ ನಿಶ್ಚಯ ಆಗಿತ್ತು. ಆಲೂರಿನ ಬೈರಾಪುರ ರಸ್ತೆಯ ಶ್ರೀ ವೀರಶೈವ ಕಲ್ಯಾಣ ಮಂಟಪದಲ್ಲಿ ಮದುವೆ ನಡೆಯಬೇಕಿತ್ತು.

> ಒಟ್ಟಿನಲ್ಲಿ ಮದುವೆಯ ಆಮಂತ್ರಣ ಪತ್ರಿಕೆ ಹಂಚಿ, ಎಲ್ಲರನ್ನೂ ಬರಮಾಡಿಕೊಂಡು ವಿವಾಹದ ದಿನದಂದು ಎಲ್ಲರ ಸಮ್ಮುಖದಲ್ಲಿ ನವ ವಧು-ವರರಿಗೆ ಅಕ್ಷತೆ ಹಾಕಬೇಕಿದ್ದ ಹೆತ್ತವರ ಕೈಗಳು ಇಂದು ಮಗನ ಚಿತೆಗೆ ಅಗ್ನಿಸ್ಪರ್ಶ ಮಾಡು ವಂತಾಗಿದ್ದು ಮಾತ್ರ ನಿಜಕ್ಕೂ ದುರಂತವೇ ಸರಿ.

ಆದರೆ ತನ್ನ ಮದುವೆಯ ಸವಿನೆನಪಿಗಾಗಿ ಪ್ರೀ ವೆಡ್ಡಿಂಗ್ ಶೂಟ್ ಮಾಡಿಸಿಕೊಳ್ಳಬೇಕೆಂಬ ಹಂಬಲ ಮನುಗಿತ್ತು. ಈ ಆಸೆ ಈಡೇರಿಸಿಕೊಳ್ಳಲು ತನ್ನ ಭಾವಿ ಪತ್ನಿಯನ್ನು ಆಲೂರಿನಿಂದ ಕರೆತರಲು ಬುಧವಾರ ಸಂಜೆ ಕಾರಿನಲ್ಲಿ ಹೋಗುತ್ತಿದ್ದ. ಹತ್ತಾರು ಕನಸುಗಳು ಆತನೊಂದಿಗೆ ಸಾಗಿದ್ದವು. ಆದರೆ ವಿಧಿ ಬೇರೆಯದನ್ನೇ ಬಗೆದಿದೆ.

**ಮರಕ್ಕೆ ಅಪ್ಪಳಿಸಿದ ಕಾರು**

ಸಕಲೇಶಪುರ ತಾಲ್ಲೂಕಿನ ಮೂಗಲಿ ಎಂಬಲ್ಲಿ ಮನು ಚಲಾಯಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ವೇಗವಾಗಿ ಅಪ್ಪಳಿಸಿದೆ. ಅಪಘಾತದ ತೀವ್ರತೆ ಎಷ್ಟಿತ್ತೆಂದರೆ, ಕಾರಿನ ಬಲಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಅದರೊಳಗಿದ್ದ ಮದುವೆ ಆಹ್ವಾನ ಪತ್ರಿಕೆಗಳು ಚೆಲ್ಲಾಪಿಲ್ಲಿಯಾಗಿ ಹೊರಗೆ ಬಿದ್ದಿವೆ. ಗಂಭೀರ ಗಾಯಗೊಂಡ ಮನು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾನೆ. ಅಲ್ಲಿಗೆ ಸುಂದರ ಕನಸುಗಳನ್ನು ಹೊತ್ತು ಮದುವೆಯ ತಯಾರಿಯಲ್ಲಿದ್ದ ಯುವಕ ಆಸೆ-ಆಕಾಂಕ್ಷೆಗಳು ಕ್ಷಣಾರ್ಧದಲ್ಲೇ ಆತನೊಂದಿಗೆ ಮಣ್ಣು ಪಾಲಾಗಿವೆ.

ಇದರಿಂದ ಯಾವ ಮನೆಯಲ್ಲಿ ಮದುವೆ ಮಂತ್ರ ಮೊಳಗಬೇಕಿತ್ತೋ, ಅಲ್ಲಿಂದು ಮಗನನ್ನು ಕಳೆದುಕೊಂಡ ತಂದೆ-ತಾಯಿಯ ಆಕ್ರಂದನ ಮುಗಿಲು ಮುಟ್ಟಿದೆ. ಎಲ್ಲರಂತೆಯೇ ಮದುವೆಗೂ ಮುನ್ನ ಇಷ್ಟಪಟ್ಟವಳೊಂದಿಗೆ ಫೋಟೋ ತೆಗಿಸಿಕೊಳ್ಳಲು ಹೋಗುತ್ತಿದ್ದ ಮಗ ಬಾರದ ಲೋಕಕ್ಕೆ ಪಯಣಿಸಿರುವ ಸುದ್ದಿ ಇಡೀ ಲಕ್ಕುಂದ ಗ್ರಾಮದ ದರ್ಬಾರ್ ಪೇಟೆಯನ್ನು ಮೌನದಲ್ಲಿ ಮುಳುಗಿಸಿದೆ.

ಇತ್ತ ತನ್ನ ಬಾಳ ಸಂಗಾತಿಯಾಗಬೇಕಿದ್ದವನನ್ನು ಕಳೆದುಕೊಂಡ ವಧು ಸಹ ಒಂದೇ ಸಮನೆ ಕಣ್ಣೀರಿಡುತ್ತಿದ್ದಾಳೆ.

# ಮಾದರಿ ಮದುವೆ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮದುವೆ ಎಂಬ ಪವಿತ್ರ ಬಂಧ ಇತ್ತೀಚಿನ ದಿನಗಳಲ್ಲಿ ದುಂದುವೆಚ್ಚ ಹಾಗೂ ಇನ್ನಿತರೆ ಕಾರಣಗಳಿಂದ ಮೂಲ ಪಾವಿತ್ರ್ಯತೆ ಕಳೆದುಕೊಳ್ಳುತ್ತಿದ್ದು, ಸಾಮಾನ್ಯ ಕುಟುಂಬಗಳಿಗೆ ಆರ್ಥಿಕ ಭಾರವಾಗಿ ಪರಿಣಮಿಸಿದೆ. ಮದುವೆಗಾಗಿ ಸಾಲದ ಹೊರೆ ಹೊರುವ ಪರಿಸ್ಥಿತಿ ಅಥವಾ ಮದುವೆಯನ್ನೇ ಮುಂದೂಡುವ ಅನಿವಾರ್ಯತೆ ಹೋಗಲಾಡಿಸಲು ಕರ್ನಾಟಕ ರಾಜ್ಯ ಸುನ್ನಿ ಯುವಜನ ಸಂಘ (ಎಸ್‌ವೈಎಸ್) ಮಾದರಿ ಮದುವೆ ಎಂಬ ಅಭಿಯಾನ ಆರಂಭಿಸಿದೆ ಎಂದು ಎಸ್‌ವೈಎಸ್ ರಾಜ್ಯ ಕಾರ್ಯದರ್ಶಿ ಹಸೈನಾರ್ ಆನೆಮಹಲ್ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಂಪ್ರದಾಯಿಕ ಹಾಗೂ ಮಾದರಿ ಮದುವೆಗಾಗಿ ಸಮಾಜದಲ್ಲಿ ಜನಜಾಗೃತಿ ಮೂಡಿಸಲು ಕಳೆದ ನಾಲ್ಕು ತಿಂಗಳುಗಳಿಂದ ರಾಜ್ಯಾದ್ಯಂತ ಅಭಿಯಾನ ಮಾಡಲಾಗುತ್ತಿದೆ ಎಂದರು.




ಅಭಿಯಾನದ ಸಮಾರೋಪ ಸಮ್ಮೇಳನ ಮೇ 2ರಂದು ಪುತ್ತೂರಿನ ಕಿಲ್ಲೆ ಮೈದಾನದಲ್ಲಿ ನಡೆಯಲಿದೆ.

ಮದುವೆಗಳನ್ನು ಅನಾಚಾರಮುಕ್ತಗೊಳಿಸಲು ಮತ್ತು ಆರ್ಥಿಕ ಭಾರ ಹಗುರಗೊಳಿಸಲು ಸಮಾಜದ ಮೊಹಲ್ಲಾ ನಾಯಕರು, ಧರ್ಮಗುರುಗಳು, ಯುವಕರು, ಯುವತಿಯರು, ಪೋಷಕರು ಸೇರಿದಂತೆ ವಿವಿಧ ವರ್ಗದ ಜನರಲ್ಲಿ ಜಾಗೃತಿ ಮೂಡಿಸುವ ಅನೇಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಪ್ರತಿ ಮೊಹಲ್ಲಾದಲ್ಲೂ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಪ್ರಮುಖರನ್ನೊಳಗೊಂಡ ಕ್ರಿಯಾ ಸಮಿತಿ ರಚಿಸುವ ಮೂಲಕ ಚಳವಳಿ ಬಲಪಡಿಸಲಾಗಿದೆ. ಸ್ಪೀಕರ್ ಡಾ.ಯು.ಟಿ. ಖಾದರ್, ಚಿಂತಕರು, ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಸಯ್ಯದ್ ಶಾಫಿ ನಯೀಮಿ ತಂಜಳ್, ಜಿಲ್ಲಾಧ್ಯಕ್ಷ ರಶೀದ್ ಮುಸ್ಲಿಯಾರ್, ಜಿಲ್ಲಾ ಕೋಶಾಧಿಕಾರಿ ಝುಕರಿಯಾ, ಜಿಲ್ಲಾ ಉಪಾಧ್ಯಕ್ಷ ಜಾಫರ್ ಖುಶಾಲಿ, ಶರೀಫ್ ಆನೆಮಹಲ್, ಹೈದರ್ ಬಕ್ರವಳ್ಳಿ, ಮುಸ್ತಫಾ ಕುಡುಗರಹಳ್ಳಿ ಇದ್ದರು.

# ಇಂದು 140ನೇ ಹುಣ್ಣಿಮೆ ಕಾರ್ಯಕ್ರಮ

ಹಾಸನ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ವತಿಯಿಂದ ಮೇ 1ರ ಶುಕ್ರವಾರ ಸಂಜೆ 5.30ಕ್ಕೆ ಅರಸೀಕೆರೆ ತಾಲೂಕಿನ ಬಾಗೇಶಪುರದ ಶ್ರೀ ಮೈಸೂರಮ್ಮನ ದೇವಸ್ಥಾನದ ಆವರಣದಲ್ಲಿ ಗುರು ತೋರಿದ ದಾರಿ ತಿಂಗಳ ಮಾಮನ ತೇರು 140ನೇ ಹುಣ್ಣಿಮೆ ಕಾರ್ಯಕ್ರಮ ಜರುಗಲಿದೆ.

ಶ್ರೀ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದು, ಆಶೀರ್ವಚನ ನೀಡಲಿದ್ದಾರೆ. ಶ್ರೀ ಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುದೇವರ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ಪೂಜ್ಯ ಶ್ರೀ ಶಂಭುನಾಥ ಸ್ವಾಮೀಜಿ ಕೋರಿದ್ದಾರೆ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವ್ಯವಸ್ಥಾಪಕ ಹೆಚ್.ಕೆ. ಚಂದ್ರಶೇಖರ್ ತಿಳಿಸಿದ್ದಾರೆ.

# ಮಾಡುವ ಕೆಲಸದಲ್ಲಿ ನಿಷ್ಠೆಯಿರಲಿ : ಬಿ.ಆರ್.ಎಲ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾ ಹೋಗೋಣ, ಕೇಳುವ ಹೃದಯಗಳಲ್ಲಿ ಯಾವುದಾದರೂ ಒಂದೆರಡು ಹೃದಯಗಳು ಸಾಹಿತ್ಯದ ಎಡೆಗೆ ಹಾತೊರೆಯಬಹುದು, ಸಾಹಿತ್ಯವನ್ನು ಮುನ್ನಡೆಸಬಹುದು, ಹಾಗೆಯೇ ಬೆಳೆಸಬಹುದು ಎಂದು ಕವಿ ಬಿ.ಆರ್. ಲಕ್ಷ್ಮಣ್ ರಾವ್ ಹೇಳಿದರು.

ನಗರದ ರಿಂಗ್ ರಸ್ತೆಯಲ್ಲಿರುವ ಅಕ್ಷರ ಅಕಾಡೆಮಿಯಲ್ಲಿ ನಡೆದ ಬುಕ್-ಮಾತು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಮ್ಮ ಸಾಹಿತ್ಯ ಸುಬ್ಬ ಭಟ್ಟರ ಮಗಳೇ ಎಂಬ ಜನಪ್ರಿಯ ಹಾಡನ್ನು ತಮ್ಮ ಕಂಡಸಿರಿಯಲ್ಲಿ ಹಾಡಿ ನೆರೆದಿದ್ದಂತಹ ಎಲ್ಲ ಸಭಿಕರ ಮನಸ್ಸಿಗೆ ಮುದ ನೀಡಿದರಲ್ಲದೆ ಸರಳವಾಗಿ ಅರ್ಥೈಸಿದರು.




ಚಲನಚಿತ್ರ ನಿರ್ದೇಶಕ ಲಿಂಗದೇವರು ಮಾತನಾಡಿ, ಹೆತ್ತವರ ನೋಡಿಕೊಳ್ಳುವುದು ನಮ್ಮೆಲ್ಲರ ಹೊಣೆಗಾರಿಕೆ, ನಮ್ಮೆಲ್ಲರ ಕರ್ತವ್ಯ. ಎಂದು ಹೇಳಿ ಸಭಿಕರ ಪ್ರಶ್ನೆಗಳಿಗೆ ಸಂವಾದದಲ್ಲಿ ಉತ್ತರಿಸಿದರು. ಮೌನಿ, ನಾನು ಅವನಲ್ಲ, ಅವಳು ಚಲನಚಿತ್ರಗಳ ಅವರ ಅನುಭವಗಳನ್ನ ಅತ್ಯಂತ ಸುಂದರವಾಗಿ ಎಲ್ಲರೊಂದಿಗೆ ಹಂಚಿಕೊಂಡರು.

ಇಂದು ಕೇವಲ ಆದಾಯದ ದೃಷ್ಟಿಕೋನದಲ್ಲಿ ಬೆಳೆಯುತ್ತಿರುವ ಚಲನಚಿತ್ರ ಕ್ಷೇತ್ರದಲ್ಲಿ ಇಂತಹ ವ್ಯಕ್ತಿಗಳ ಸಾಮಾಜಿಕ ಕಳಕಳಿಯುಳ್ಳ ಇಂತಹ ಪ್ರಯೋಗ ಶೀಲ ಚಿತ್ರಗಳು ಸಿನಿ ರಸಿಕರನ್ನು ಮಂತ್ರ ಮುಗ್ಧರನ್ನಾಗಿಸುವುದರೊಂದಿಗೆ ನಿರ್ದೇಶಕರಿಗೂ ಸಹ ರಾಷ್ಟ್ರಮಟ್ಟದ ಪ್ರಶಸ್ತಿ ತಂದು ಕೊಟ್ಟಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದರು.

ಅಕ್ಷರ ಅಕಾಡೆಮಿ ಹಾಗೂ ಟೈಮ್ಸ್ ಸಮೂಹ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಟೈಮ್ಸ್ ಗಂಗಾಧರ್ ಮಾತನಾಡಿ, ಯುವ ಪೀಳಿಗೆಯಲ್ಲಿ ಸಾಹಿತ್ಯದ ಬೆಳವಣಿಗೆ ಅಥವಾ ಸಾಹಿತ್ಯದ ಅಭಿವೃದ್ಧಿ ಹೇಗಾಗಬಹುದೆಂಬ ದೂರ ದೃಷ್ಟಿಕೋನದ ಪ್ರಶ್ನೆಯನ್ನು ಆಹ್ವಾನಿತರಲ್ಲಿ ಮುಂದಿಟ್ಟರು. ತಮಗಿರುವ ಸಾಹಿತ್ಯದ ಆಸಕ್ತಿಯೊಂದಿಗೆ ಇಂದಿನ ಗೂಗಲ್ ವಿಷಯವನ್ನ ಹೇಳಬಹುದೇ ಹೊರತು ಜ್ಞಾನವನ್ನು ನೀಡುವುದಿಲ್ಲ. ಪುಸ್ತಕಗಳು ಹಾಗೂ ಇಂಥ ಸಾಹಿತಿಗಳ ಸಮಾಗಮ ನಮ್ಮನ್ನು ಮುಖ್ಯ ವಾಹಿನಿಯಲ್ಲಿ ಹಾಗೂ ಜ್ಞಾನ ಸಂಪಾದನೆಯಲ್ಲಿ ಅತ್ಯಂತ ಉತ್ತುಂಗಕ್ಕೆ ಕೊಂಡೊಯ್ಯಲು ಸಹಕಾರಿಯಾಗಿವೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಅಕ್ಷರ ಅಕಾಡೆಮಿ ಸಂಚಾಲಕ ಕಾರ್ತಿಕ್ ಹಾಗೂ ಇತರರು ಹಾಜರಿದ್ದರು.

# ಕಾಂಗ್ರೆಸ್‌ಗೆ ಮುಸ್ಲಿಂ ಮುಖಂಡರ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮುಖಂಡರನ್ನು ಕಡೆಗಣಿಸುತ್ತಿರುವ ತಪ್ಪನ್ನು ಕಾಂಗ್ರೆಸ್ ನಾಯಕರು ಸರಿಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ ಎಂದು ಜಿಲ್ಲಾ ಮುಸ್ಲಿಂ ಮುಖಂಡರು ಎಚ್ಚರಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಾಸನ ಜಿಲ್ಲಾ ಅಲ್ಪಸಂಖ್ಯಾತ ಮುಸ್ಲಿಂ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಸಮೀರ್ ಅಹಮದ್, ನಮ್ಮ ಸಮುದಾಯದ ರಾಜಕೀಯ ನಾಯಕರನ್ನು ವಿವಿಧ ಹುದ್ದೆಗಳಿಂದ ವಜಾಗೊಳಿಸಿರುವುದನ್ನು ತೀವ್ರವಾಗಿ ಖಂಡಿಸಿದರು. ಅಲ್ಲದೆ ಅಲ್ಪ ಸಂಖ್ಯಾತ ಘಟಕದ ರಾಜ್ಯಾಧ್ಯಕ್ಷರಾಗಿದ್ದ ಅಬ್ದುಲ್ ಜಬ್ಬಾರ್ ಸೇರಿದಂತೆ ಎಲ್ಲರಿಗೂ ಹುದ್ದೆಗಳನ್ನು ಮರುಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಅವಕಾಶ ನೀಡಬೇಕಿತ್ತು.




ಆದರೆ ಅದನ್ನು ಮಾಡದ ಕಾಂಗ್ರೆಸ್, ಇಲ್ಲಸಲ್ಲದ ಕಾರಣ ನೀಡಿ ಅಬ್ದುಲ್ ಜಬ್ಬಾರ್, ನಾಸಿರ್ ಅಹಮದ್ ಮೊದಲಾದವರ ಮೇಲೆ ಕ್ರಮ ಜರುಗಿಸಿರುವುದು ಸರಿಯಲ್ಲ. ಕಳೆದ ಚುನಾವಣೆಯಲ್ಲಿ ಇಡೀ ಸಮುದಾಯ ರಾಜ್ಯಾದ್ಯಂತ ಕಾಂಗ್ರೆಸ್ ಬೆಂಬಲಿಸಿದ ಪರಿಣಾಮ ಪಕ್ಷ ಅಧಿಕಾರಕ್ಕೆ ಬಂದಿದೆ. ಅಂಥ ಸಮುದಾಯದ ನಾಯಕರ ಮೇಲೆ ಗದಾಪ್ರಹಾರ ಮಾಡಿರುವುದು ಸರಿಯಲ್ಲ, ಈಗ ಸಚಿವ ಜಮೀರ್ ಅವರ ತಲೆದಂಡಕ್ಕೂ ಹುನ್ನಾರ ನಡೆಯುತ್ತಿದೆ ಎಂಬ ಗುಸು ಗುಸು ಇದ್ದು, ಯಾವುದೇ ಕಾರಣಕ್ಕೂ ಅದು ಆಗಬಾರದು ಎಂದರು.

ಕಾಂಗ್ರೆಸ್‌ನಲ್ಲಿ ಅನೇಕ ನಾಯಕರು ಬಹಿರಂಗವಾಗಿಯೇ ಪಕ್ಷ ಹಾಗೂ ಅಗ್ರ ನಾಯಕರ ವಿರುದ್ಧ ಮಾತನಾಡಿದ್ದರೂ ಅಂಥವರ ಮೇಲೆ ಯಾವುದೇ ಕ್ರಮ ಆಗಿಲ್ಲ. ಆದರೆ ಏನೂ ಮಾತನಾಡದವರ ಮೇಲೆ ಕ್ರಮ ಆಗಿರುವುದು ಖಂಡನೀಯ. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರನ್ನು ಕೇವಲ ಓಟ್ ಬ್ಯಾಂಕ್ ಎಂದು ಭಾವಿಸಬಾರದು. ಕೂಡಲೇ ತಪ್ಪು ತಿದ್ದುಕೊಳ್ಳದೇ ಇದ್ದರೆ ನಮಗೂ ಪರ್ಯಾಯ ಮಾರ್ಗ ಇದೆ ಎಂದು ಎಚ್ಚರಿಸಿದರು.

ಅನ್ಯಾಯ ಸರಿಪಡಿಸದೇ ಇದ್ದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದರು.

ಮತ್ತೊಬ್ಬ ಮುಖಂಡ ಅಕ್ಮಲ್ ಜಾವೇದ್ ಮಾತನಾಡಿ, ಕಾಂಗ್ರೆಸ್‌ನವರು ಮುಸ್ಲಿಂ ಸಮುದಾಯವನ್ನು ಇಷ್ಟೊಂದು ಕೀಳಾಗಿ ಕಂಡರೆ ಮುಂದೆ ತಕ್ಕಪಾಠ ಕಲಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೆಲ ಕಚ್ಚಿದರೂ ಅಚ್ಚರಿ ಪಡಬೇಕಿಲ್ಲ ಎಂದು ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಗೌರವಾಧ್ಯಕ್ಷ ಅಮೀರ್ ಜಾನ್, ಅಖಿಲ್ ಅಹಮದ್, ಸುಲೈಮಾನ್ ಪಾಷ, ಸಯ್ಯದ್ ಅನ್ಸರ್ ಇದ್ದರು.

# ಗಾಯಾಳು ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೇಮಾವತಿ ನಾಲೆಗೆ ಸ್ವಿಫ್ಟ್ ಕಾರು ಉರುಳಿ ಗಾಯಗೊಂಡಿದ್ದವರ ಪೈಕಿ ಒಬ್ಬರು ಮೃತಪಟ್ಟಿದ್ದಾರೆ. ಇದರಿಂದ ಸಾವಿನ ಸಂಖ್ಯೆ ಮೂರಕ್ಕೆ ಏರಿದಂತಾಗಿದೆ. ಮೃತನನ್ನು ಚರಣ್(35) ಎಂದು ಗುರುತಿಸಲಾಗಿದೆ.

ಬೆಂಗಳೂರಿನ ದೇವನಹಳ್ಳಿಯ ನಿವಾಸಿಗಳಾದ ಮಂಜುನಾಥ್, ಪತ್ನಿ ಪ್ರಿಯಾಂಕ, ಪುತ್ರ ವೈಭವ್, ಸಂಬಂಧಿಗಳಾದ ಚಂದನ್, ದಿಲೀಪ್ ಮತ್ತು ದೇವರಾಜು ಎಂಬುವರು ಧರ್ಮಸ್ಥಳ ಪ್ರವಾಸ ಮುಗಿಸಿ ಬುಧವಾರ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಚನ್ನರಾಯಪಟ್ಟಣ ತಾಲ್ಲೂಕು ಮಲ್ಲನಘಟ್ಟ ಬಳಿ ನೀರಿಲ್ಲದ ನಾಲೆಗೆ ಶಿಫ್ಟ್ ಕಾರು ಉರುಳಿತ್ತು. ದುರಂತದಲ್ಲಿ ಗಂಭೀರ ಗಾಯಗೊಂಡ ಪ್ರಿಯಾಂಕ (30) ಹಾಗೂ ಇವರ ಒಂದೂವರೆ ವರ್ಷದ ಮಗ ವೈಭವ್ ಸ್ಥಳದಲ್ಲೇ ಮೃತಪಟ್ಟಿದ್ದರು.

ಉಳಿದವರನ್ನು ತಾಲೂಕು ಹಾಗೂ ಹಾಸನ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ತೀವ್ರವಾಗಿ ಗಾಯಗೊಂಡಿದ್ದ ಚರಣ್ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಅಡುಗೆ ಭಟ್ಟರಾಗಿದ್ದ ಶಿಡ್ಲಘಟ್ಟ ಮೂಲದ ಚರಣ್, ಇಂದು ಬೆಳಿಗ್ಗೆ ಕೊನೆಯುಸಿರೆಳೆದಿದ್ದಾರೆ. ಉಳಿದ ಮೂವರು ಚಿಕಿತ್ಸೆ ಪಡೆಯುತ್ತಿದ್ದಾರೆ.

# ಮೋಕ್ಷಿತರವೀಶ್‌ಗೆ ಶೇ. 99.2 ಫಲಿತಾಂಶ




ಹಾಸನ: ನಗರದ ಪಾಂಡಿತ್ಯ ಯೂರೋ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ ಮೋಕ್ಷಿತ ರವೀಶ ಅವರು ಶೇ. 99.2 ರಷ್ಟು ಫಲಿತಾಂಶ ಪಡೆದಿದ್ದಾರೆ.

ಐಸಿಎಸ್‌ಇ ಬೋರ್ಡ್‌ನ ಜೋನಲ್ ಟಾಪರ್ ಆಗಿದ್ದಾರೆ. ಇವರು ಡಾ.ರವೀಶ್ ಮತ್ತು ಆಶಾ ಅವರ ಪುತ್ರಿ.

# ಭಗವಾನ್ ಬುದ್ಧ ಜಯಂತಿ

ಹಾಸನ : ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಮೇ. 1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ ದೇವೇಗೌಡ ಘನ ಉಪಸ್ಥಿತರಿರಲಿದ್ದು, ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ,

# ಆ ದೃಶ್ಯ ನೋಡಿದ್ರೆ ಹೊಟ್ಟೆ ಉರಿಯುತ್ತೆ

## ಕನಿಷ್ಠ 15 ಲಕ್ಷ ಪರಿಹಾರ ಕೊಡಲಿ: ಎಚ್.ಡಿ.ರೇವಣ್ಣ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು ಏಳು ಮಂದಿ ಸಾವನ್ನಪ್ಪಿರುವ ಘಟನೆ ಅತ್ಯಂತ ಹೃದಯವಿದ್ರಾವಕವಾಗಿದ್ದು, ಮೃತರ ಕುಟುಂಬಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹೆಚ್ಚಿನ ಪರಿಹಾರ ಒದಗಿಸಬೇಕು ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಒತ್ತಾಯಿಸಿದ್ದಾರೆ. ಹಾಸನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಕೀಯ ಹಾಗೂ ಶಿಕ್ಷಣ ವ್ಯವಸ್ಥೆಯ ಕುರಿತಾಗಿಯೂ ಕಳವಳ ವ್ಯಕ್ತಪಡಿಸಿದ್ದಾರೆ.

**ಆ ದೃಶ್ಯ ನೋಡಿದರೆ ಹೊಟ್ಟೆ ಉರಿಯುತ್ತದೆ**

ಆಸ್ಪತ್ರೆ ಗೋಡೆ ಕುಸಿತದ ದುರಂತದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ ಎಚ್.ಡಿ.ರೇವಣ್ಣ, ಆ ದುರಂತದ ದೃಶ್ಯ ನೋಡಿದರೆ ಹೊಟ್ಟೆ ಉರಿದು ಹೋಗುತ್ತದೆ.



ಮೃತಪಟ್ಟವರೆಲ್ಲರೂ ಬೆಳಿಗ್ಗೆ ಎದ್ದರೆ ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದವರು. ಆಸ್ಪತ್ರೆಯ ಗೋಡೆ ಪಕ್ಕದ ಬೀದಿಯಲ್ಲಿ ಕುಳಿತು ಸಣ್ಣಪುಟ್ಟ ವ್ಯಾಪಾರ ಮಾಡುತ್ತಾ ರಾತ್ರಿ ಊಟದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಈಗ ಅವರನ್ನೇ ನಂಬಿದ್ದ ಇಡೀ ಕುಟುಂಬವೇ ಅನಾಥವಾಗಿದೆ, ಎಂದು ಕಂಬನಿ ಮಿಡಿದರು.

ಸರ್ಕಾರ ಪ್ರಸ್ತುತ ಘೋಷಿಸಿರುವ ಪರಿಹಾರ ಯಾವುದಕ್ಕೂ ಸಾಲದು. ರಾಜ್ಯ ಸರ್ಕಾರ ಕನಿಷ್ಠ 10 ಲಕ್ಷ ರೂ. ಹಾಗೂ ಕೇಂದ್ರ ಸರ್ಕಾರ ಅಥವಾ ಪ್ರಧಾನಮಂತ್ರಿಗಳು 5 ಲಕ್ಷ ರೂ. ಸೇರಿದಂತೆ ಒಟ್ಟು 15 ಲಕ್ಷ ರೂ. ಪರಿಹಾರವನ್ನು ಆ ಬಡ ಕುಟುಂಬಗಳಿಗೆ ನೀಡಬೇಕು ಎಂದು ರೇವಣ್ಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಆಗ್ರಹಿಸಿದರು.

ರಾಜ್ಯದ ಸರ್ಕಾರಿ ಶಾಲೆಗಳ ದುಸ್ಥಿತಿ ಬಗ್ಗೆಯೂ ಧ್ವನಿಯೆತ್ತಿದ ಮಾಜಿ ಸಚಿವರು, ಶಿಕ್ಷಣ ಸಚಿವರಿಗೆ ನೇರ ಎಚ್ಚರಿಕೆ ನೀಡಿದರು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ತಕ್ಷಣವೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು.

ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಿ, ಹಳ್ಳಿ ಮಕ್ಕಳಿಗೆ ಗುಣಮಟ್ಟದ ಒಳ್ಳೆಯ ವಿದ್ಯಾಭ್ಯಾಸ ಒದಗಿಸಬೇಕು.

ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

### ಸಿಎಂ ಬದಲಾವಣೆ ಅವರಿಗೆ ಬಿಟ್ಟದ್ದು ಮೊದಲು ಜನರನ್ನು ಉಳಿಸಿ

**ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿ ಬದಲಾವಣೆ ವದಂತಿಗಳ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು, ಅದು ಅವರ ಪಕ್ಷದ ವಿಚಾರ, ಅವರು ಏನಾದರೂ ಮಾಡಿಕೊಳ್ಳಲಿ, ಅದಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ನಮಗೆ ಬೇಕಿರುವುದು ಜನರ ಪ್ರಾಣ ಉಳಿಯಬೇಕು ಅಷ್ಟೇ. ಜನರಿಗೆ ಕುಡಿಯುವ ನೀರು ಕೊಡಿ ಎಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ, ಎಂದರು.**

**ಉಳಿದ ರಾಜಕೀಯ ಹಾಗೂ ಬೇರೆ ವಿಷಯಗಳ ಬಗ್ಗೆ ನಾನೀಗ ಮಾತನಾಡುವುದಿಲ್ಲ. 2028ರ ಚುನಾವಣೆ ಬಂದಾಗ ರಾಜಕೀಯ ಮಾಡೋಣ, ಮೊದಲು ಜನರನ್ನು ಉಳಿಸಿಕೊಳ್ಳುವ ಕೆಲಸ ಆಗಲಿ, ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದರು.**

# ಶಿಕ್ಷಣದಿಂದ ಮಾತ್ರ ಮೌಢ್ಯಾಚರಣೆ ಬೇರು ಸಮೇತ ಕಿತ್ತೊಗೆಯಲು ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಶಿಕ್ಷಣದಿಂದ ಮೌಢ್ಯಾಚರಣೆಯನ್ನು ಬೇರು ಸಮೇತ ಕಿತ್ತೊಗೆಯಲು ಶಿಕ್ಷಣದಿಂದ ಮಾತ್ರ ಸಾಧ್ಯ, ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೆ ಹೆಣ್ಣು ಮಕ್ಕಳ ಒಳಿತಿಗಾಗಿ, ಸಮಾನತೆಗಾಗಿ, ಹಕ್ಕುಗಳಿಗಾಗಿ ಶಿಕ್ಷಣದ ಮೂಲಕ ಅವರನ್ನು ಗಟ್ಟಿಗೊಳಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮತ್ತು ಸದಸ್ಯ ಕಾರ್ಯದರ್ಶಿಗಳಾದ ದಾಕ್ಷಾಯಿಣಿ ಜಿ.ಕೆ ತಿಳಿಸಿದ್ದಾರೆ.




ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಅರಸೀಕೆರೆ ತಾಲೂಕು ಕಾನೂನು ಸೇವಾ ಸಮಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯ ಚೀಲನಹಳ್ಳಿ ಗೊಲ್ಲರಹಟ್ಟಿಯಲ್ಲಿ ಏರ್ಪಡಿಸಲಾಗಿದ್ದ ಮುಟ್ಟಿನ ಸಮಯದಲ್ಲಿ ಮತ್ತು ಹೆರಿಗೆಯ ನಂತರ ಹೆಣ್ಣು ಮಕ್ಕಳನ್ನು ಊರಿನಿಂದ ಹೊರಗಿಡುವ ಅನಿಷ್ಟಾಚಾರಣೆಯ ನಿಷೇಧದ ಕುರಿತು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಹಿಂದಿನ ಕಾಲದಿಂದಲೂ ಜಾರಿಯಲ್ಲಿದ್ದ ಮೂಢನಂಬಿಕೆಗಳಿಗೆ ಬೇಸತ್ತು ಪತ್ರವನ್ನು ಮಹಿಳೆಯರು ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಬರೆದು ಮೌಢ್ಯಾಚರಣೆಯನ್ನು ನಿಷೇಧಿಸುವಂತೆ ಮತ್ತು ಈ ಬಗ್ಗೆ ಜಾಗೃತಿ ಮೂಡಿಸಿ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸುವಂತೆ ಕೋರಿದ್ದು ಗ್ರಾಮದ ಹೆಣ್ಣು ಮಕ್ಕಳ ಆರೋಗ್ಯ, ರಕ್ಷಣೆ ಹಾಗೂ ಭವಿಷ್ಯದ ದೃಷ್ಟಿಯಿಂದ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆ ಎಂದು ಶ್ಲಾಘಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248